# ಕರ್ನಾಟಕ ಗಮಕ ಕಲಾ ಪರಿಷತ್ತು (ರಿ)

ನಂ.8, "ಅಗಸ್ತ್ಯಎನ್‌ಕ್ಲೇವ್", ನೆಲಮಹಡಿ, 13ನೇ ಮುಖ್ಯರಸ್ತೆ, ಶ್ರೀನಗರ,1ನೇ ಬ್ಲಾಕ್, ಬಿ.ಎಸ್.ಕೆ. 1ನೇ ಹಂತ,ಬೆಂಗಳೂರು–560050.

---

## 2020–21ನೇ ಸಾಲಿನ ಗಮಕ ಪಾರೀಣ ಪರೀಕ್ಷೆ ಪ್ರಶ್ನಪತ್ರಿಕೆ

## ಸಾಹಿತ್ಯವಿಭಾಗ

**ಸಮಯ– 3 ಗಂಟೆ (ಉತ್ತರ ನೇರವಾಗಿರಲಿ: ಅಂಕವನ್ನು ಗಮನಿಸಿ ಬರೆಯಿರಿ: ಸಮಯದ ಪರಿವೆಯಿರಲಿ) ಅಂಕಗಳು– 100**

---

**1. ಕವಿ ಮತ್ತು ಕಾವ್ಯದ ಬಗ್ಗೆ ತಿಳಿಸಿರಿ:– 10**

ಅ) ನಾರಣಪ್ಪ ಆ) ವಿರೂಪಾಕ್ಷಪಂಡಿತಾರಾಧ್ಯ

**2. ಕೆಳಗಿನ ಕಠಿಣ ಪದಗಳ ಅರ್ಥ ಬರೆಯಿರಿ: 5**

1) ಗವಾಳಿ 2)ಕುಕ್ಷಿ 3) ರೂಕ್ಷ 4) ಅರಕೆ 5) ಹೆಕ್ಕಳ
6) ವಿಗ್ರಹ 7) ನಲ್ಲೆ 8) ಜಲಜಭವ 9) ಬುಧ 10) ಬಿಡುಗಣ್ಣ

**3. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ: 5**

ಅ) 'ಶ್ರೀ ರಾಮಾಯಣದರ್ಶನಂ' ಈ ಮೇರು ಕೃತಿ ಯಾವ ಛಂದಸ್ಸಿನಲ್ಲಿದೆ?
ಆ) ನವರಸಗಳಾವುವು?
ಇ) 'ರಗಳೆಯ ಮೂರು ಮುಖ್ಯ ಪ್ರಬೇಧಗಳನ್ನು ಹೆಸರಿಸಿ?
ಈ) ಸಾಹಿತ್ಯದ ಬಗ್ಗೆ ಬರೆಯಿರಿ?
ಉ) ಕಂದಪದ್ಯ ಎಂದರೇನು?

**4. ಬಿಟ್ಟಜಾಗವನ್ನು ತುಂಬಿಸಿ ಬರೆಯಿರಿ: 5**

ಅ) ವೃತ್ತಗಳು -------- ಗಣವನ್ನು ಹೊಂದಿರುತ್ತದೆ.
ಆ) ಕಾವ್ಯವೇ ಮೂಲಾಧಾರ! ವಾದ ಕಲೆ ---------
ಇ) ತ್ರಿಪದಿಯಲ್ಲಿನ ಪಾದಗಳ ಸಂಖ್ಯೆ ----------
ಈ) ಒತ್ತಕ್ಷರಗಳನ್ನು ಒತ್ತಿಹೇಳದೆ ತೇಲಿಸಿ ಹೇಳುವುದು ------ ಎನ್ನಿಸುತ್ತದೆ.
ಉ) ಸಾಹಿತ್ಯದ ಕಿರೀಟ -------

**5. ತಪ್ಪು + ಒಪ್ಪು ತಿಳಿಸಿರಿ: 5**

ಅ) ರಸಗಳ ರಾಜ– ಅದ್ಭುತ!
ಆ) ಕಂದಪದ್ಯ– ಅಕ್ಷರಗಣ
ಇ) ಮಂದಾನಿಲ– ಷಟ್ಪದಿ
ಈ) ಸಾಂಗತ್ಯ– ಗದ್ಯ
ಉ) ತ್ರಿಪದಿ– ಆರು ಸಾಲಿನ ಪದ್ಯ

6. **ಇದು ಯಾವ ವೃತ್ತ? ಸೂತ್ರ ಬರೆದು ಅದರ ಲಕ್ಷಣ ತಿಳಿಸಿರಿ:** **10**

ಶ್ರೀಶೈಲಾದ್ರಿಪ್ರಸಿದ್ಧಂ ಸುರುಚಿರ ವಿಜಯಸ್ತುತ್ಯನುದ್ರಿಕ್ತ ಸತ್ವಾಂ
ವೇಶಂ ಕಲ್ಯಾಣಭೂಭೃತ್ಸದನ ಧನದಮಿತ್ರಂ ಧರಾಧಾರಧರ್ಮಂ
ವೈಶದ್ಯದ್ಯೋತಿ ಚಂದ್ರೋಪಲ ಸಿತಭಸಿತಾನಂತಕಾಂತೋತ್ತಮಾಂಗಂ
ಶ್ರೀಶೈವಶ್ರೇಯಮಂ ಮಾಳ್ಕೆಮಗನವರತಂ ನಂದಿಕೇಶಂ ಮಹೇಶಂ

7. **ಹಳಗನ್ನಡಕ್ಕೆ ಹೊಸಗನ್ನಡ ಬರೆಯಿರಿ:** **10**

"ಎಲ್ಲರೂ ಲಾಲಿಪುದು. ಆನೀಮನದನ್ನನ ಕೈವಿಡಿವುದರ್ಕೆ ಮೊದಲ್ ಎನ್ನಯ ಜನಕನಪ್ಪ ಜನಕನೆಡೆಯೊಳಿರ್ದುದಂ ಬಲ್ಲಿರೆ, ಅಂತಾಯೆಡೆಯೊಳ್ ಬಳೆಯುತಿರ್ದುದಂ, ಮಕ್ಕಳಾಟಿಕೆಯಾದೊಡಂ ಮರೆತುದಿಲ್ಲಂ, ಒಮ್ಮೆ ಎಮ್ಮರಮನೆಗೆ ಅತಿಥಿರೂಪದೊಳೊರ್ವಂ ಪಾರ್ವಂ ಬರೆ, ಅಯ್ಯನೊಯ್ಯನೆ ಎಳ್ದು ಮನ್ನಿಸಿಪಾಸಿತ್ತು ಕುಳ್ಳಿರಿಸಿದಂ ಆಗಳಾ ಭೂಸುರಂ ಬೊಪ್ಪಂಗೆ– "ನೀನೊಪ್ಪಿದೊಡೆ ನಿನ್ನೀಯರಮನೆಯೊಳ್ ನಾಲ್ಗಾಲಮಿರಲಿಚ್ಛಿಪೆಂ". ಎಂಬುದಂ; ತಾತನೊಲ್ಲೆನೆಂಬನೆ ಸಂತಸದಿನೊಪ್ಪಿ, ತನ್ನ ಬೀಡೊಳೆ ನಿಲ್ಲಿಸುತೆ, ಎಂತುಂ ಕುಂದುದೋರದವೋಲ್ ಸಾಕುತೆ. ಪಗಲುಮಿರಳು ಮವನನಗಲದೆ ಬಳಿಯೊಳಿರಲಾನುಂ ಪಿತನಂ ಬಿಟ್ಟುದಿಲ್ಲಂ."

8. **ಮೋಹನ ತರಂಗಿಣಿಯಲ್ಲಿ "ಕವಿವರ್ಯರು" ದ್ವಿಜರ ಜೀವನಕ್ರಮವನ್ನು ವರ್ಣಿಸಿರುವ ಬಗೆ ತಿಳಿಸಬಲ್ಲಿರಾ?** **10**

9. **ಕುವೆಂಪುರವರು ಶಬರಿಯನ್ನು ತಮ್ಮ ಕಾವ್ಯದಲ್ಲಿ ಚಿತ್ರಿಸಿರುವ ವರ್ಣನೆಯನ್ನು ಬಣ್ಣಿಸಿರಿ:** **10**

10. **"ಶಿವನ ಮನದನುಕೂಲೆ" ಬೆಳೆದ ರೀತಿಯು ನಿಮ್ಮ ಲೇಖನದ ಮೂಲಕ ಮೂಡಿಬರಲಿ:** **10**

11. **ಭಕ್ತರಾದ ಭೀಷ್ಮರು ದೇವನಾದ ಕೃಷ್ಣನನ್ನು ತಮ್ಮ ಮಾತುಗಳಿಂದ ಕಟ್ಟಿಹಾಕಿದ ಪರಿಯನ್ನು ಬಣ್ಣಿಸಿ:** 10

12. **ಸಂದರ್ಭ ತಿಳಿಸಿರಿ:** **10**

ಅ) ನೀವಾರೊ ಬಡಗರಂದದಿತೋರುತಿರುವಿರಿ.
ಆ) ಜಗನ್ಮಾತೆ ನಿಮ್ಮಯ ಮಗಳೆ.

*******************************************************************